# ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

## ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ

## ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಹವಾಮಾನ ಸಲಹಾ ಸೂಚಕ

(ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಹಾಗೂ ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ, ಬ್ರಹ್ಮಾವರ–576213, ಉಡುಪಿ ಜಿಲ್ಲೆ ಕರ್ನಾಟಕ ಇವರ ಜಂಟಿ ಪ್ರಸಾರ)

**ಹವಾಮಾನ ಮುನ್ಸೂಚನೆಯ ಅವಧಿ 03-07-2024 ರಿಂದ 07-07-2024**

ಸಂ. ಗ್ರಾ.ಕೃ.ಹ.ಸೇ.ಬ/036/2024 ದಿನಾಂಕ: 02.07.2024

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು, ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಐದು ದಿನಗಳು ದಿನಾಂಕ 03-07-2024 ರಿಂದ 07-07-2024 ರ ವರೆಗೆ ಲಭ್ಯವಿರುವ ಹವಾಮಾನ ಮುನ್ಸೂಚನೆ ಈ ಕೆಳಕಂಡಂತೆ ನೀಡಿರುತ್ತಾರೆ

| ಹವಾಮಾನದ ಅಂಶಗಳು | ಕ್ರೋಢೀಕರಿಸಿದ ಹವಾಮಾನ ಮುನ್ಸೂಚನೆ | | | | | ಹಿಂದಿನ ವಾರದ ಹವಾಮಾನ ಪರಿಸ್ಥಿತಿಯ ಒಟ್ಟು/ಸರಾಸರಿ | ಮುಂದಿನ ಐದು ದಿನಗಳ ಹವಾಮಾನ ಮುನ್ಸೂಚನೆಯ ಒಟ್ಟು/ಸರಾಸರಿ |
|---|---|---|---|---|---|---|---|
| | ದಿನ–1 (03.07.2024) | ದಿನ–2 (04.07.2024) | ದಿನ–3 (05.07.2024) | ದಿನ–4 (06.07.2024) | ದಿನ–5 (07.07.2024) | | |
| ಮಳೆ ಪ್ರಮಾಣ (ಮಿ.ಮೀ.) | 25 | 25 | 26 | 27 | 28 | 330.6 | 131↓ |
| ಗರಿಷ್ಠ ಉಷ್ಣಾಂಶ (°C) | 30 | 29 | 29 | 28 | 28 | 29.3 | 28.8↓ |
| ಕನಿಷ್ಠ ಉಷ್ಣಾಂಶ (°C) | 20.9 | 20.1 | 19.7 | 19.6 | 19.3 | 22.5 | 19.9↓ |
| ಮೋಡದ ಹೊದಿಕೆ (ಒಕ್ಟಾ) | 8 | 8 | 8 | 8 | 8 | 7 | 8↑ |
| ಗರಿಷ್ಠ ಆರ್ದ್ರತೆ (ಶೇ.) | 93 | 93 | 92 | 92 | 93 | 91.8 | 92.6↑ |
| ಕನಿಷ್ಠ ಆರ್ದ್ರತೆ (ಶೇ.) | 79 | 77 | 75 | 79 | 70 | 89 | 76↓ |
| ಗಾಳಿಯ ವೇಗ (Kmph) | 6 | 6 | 6 | 7 | 7 | 6.8 | 6.4↓ |
| ಗಾಳಿಯ ದಿಕ್ಕು (°) | 180 | 158 | 163 | 167 | 169 | 198 | 167↓ |
| ಮುನ್ಸೂಚನೆ | R+ | R+ | R+ | R++ | R++ | | |
| ಸಂಭವನೀಯತೆ (%) | >75 | >75 | >75 | >75 | >75 | | |

**ಭಾರತ ಹವಾಮಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ವಿಸ್ತೃತ ಮಳೆ ಮುನ್ಸೂಚನೆಯ ಪ್ರಕಾರ ಕರ್ನಾಟಕದ ಕರಾವಳಿ ತೀರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ದಿನಾಂಕ 07.07.2024 ರಿಂದ 13.07.2024 ರವರೆಗೆ ವಾಡಿಕೆಗಿಂತ ಹೆಚ್ಚು ಮಳೆಯಾಗುವ ಸಂಭವವಿದೆ.**

## ಹವಾಮಾನ ಪರಿಸ್ಥಿತಿ ಮತ್ತು ಮುನ್ಸೂಚನೆ ಸಾರಾಂಶ

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಇವರು, ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಮುನ್ಸೂಚನೆಯ ಪ್ರಕಾರ, **ಮುಂದಿನ ಐದು ದಿನಗಳಲ್ಲಿ ಮೋಡಕವಿದ ವಾತಾವರಣವಿದ್ದು, ಗುಡುಗು–ಮಿಂಚು ಸಹಿತ ಹಲವೆಡೆ ಸಾಧಾರಣ ಮಳೆಯಾಗುವ ಸಂಭವವಿದೆ.** ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು **28.0-30.0$^o$C** ಇರುತ್ತದೆ ಮತ್ತು ಕನಿಷ್ಠ ತಾಪಮಾನವು **19.3-20.9$^o$C** ಇರುತ್ತದೆ. ಸರಾಸರಿ ಸಾಪೇಕ್ಷ ಆದ್ರತೆಯು ಬೆಳಗಿನ ಸಮಯದಲ್ಲಿ **92%** ರಿಂದ **93%** ರಷು ಇರುತ್ತದೆ. ಹಾಗೂ ಮಧ್ಯಾಹ್ನದ ಸಮಯದಲ್ಲಿ **70%** ರಿಂದ **79%** ರಷ್ಟು ಇರುತ್ತದೆ. ಸರಾಸರಿ ಗಾಳಿಯ ವೇಗವು **6-7** ಕೀ.ಮೀ. ಪ್ರತಿ ಘ,ವೇಗದಲ್ಲಿ ಬೀಸಲಿದೆ. ಈ ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದರೆ, ರೈತರು ಈ ಕೆಳಕಂಡ ಕೃಷಿ ಸಲಹೆಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.

**Mobile Applications developed by India Meteorological Department for the benefit of Farming Community Farmers are suggested to download the app using below links**

| | Mausam: | Meghdoot: | Damini: |
|---|---|---|---|
| Andriod: | https://play.google.com/store/apps/details?id=com.imd.masuam | https://play.google.com/store/apps/details?id=com.aas.meghdoot | https://play.google.com/store/apps/details?id=com.lightening.live.damini |
| Apple OS: | https://apps.apple.com/us/app/id1522893967 | https://apps.apple.com/in/app/meghdoot/id1474048155 | https://apps.apple.com/app/id1502385645 |

**Decadal Rainfall (mm) Comparison:**

| Year | 30 years Mean | 2013 | 2014 | 2015 | 2016 | 2017 | 2018 | 2019 | 2020 | 2021 | 2022 | 2023 | 2024 |
|---|---|---|---|---|---|---|---|---|---|---|---|---|---|
| Rainfall | 3710.5 | 3325.3 | 2816.3 | 2383.4 | 2827.1 | 3000 | 3381.2 | 4118.4 | 4110.8 | 4110.8 | 3879.9 | 3316.6 | 1313.3 |
| Rainy days | 105 | 127 | 112 | 107 | 119 | 121 | 112 | 123 | 126 | 152 | 125 | 105 | 46 |


Realised Rainfall (20th JUNE to 26th JUNE, 2024)




Rainfall Forecast Map (28th JUNE to 04th JULY 2024)



Temperature conditional Index Outlook (10.06.2024 to 16.06.2024)



Normalized Difference Vegetation Index



# ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಹವಾಮಾನ ಮುನ್ಸೂಚನೆ ಆಧಾರಿಸಿ ನೀಡಿದ ಕೃಷಿ ಸಲಹೆಗಳು

## ತೋಟಗಾರಿಕೆ ಬೆಳೆಗಳು:

| | |
|---|---|
| ಪೋಷಕಾಂಶ ನಿರ್ವಹಣೆ (ಕೃಷಿ ಸುಣ್ಣ) | ರೈತರು ಮಣ್ಣಿನ ತೇವಾಂಶವನ್ನಾಧಾರಿಸಿ ರಸಗೊಬ್ಬರ ನೀಡುವ 15–20 ದಿನಗಳ ಮುನ್ನ ಕೃಷಿ ಸುಣ್ಣ ಹಾಕುವುದು ಸೂಕ್ತವಾಗಿದೆ. |
| ನೀರಿನ ನಿರ್ವಹಣೆ | ಮುಂಗಾರು ಆರಂಭವಾಗುತ್ತಿರುವ ಹಿನ್ನಲೆಯಲ್ಲಿ ರೈತರು ತಮ್ಮ ಜಮೀನಿನಲ್ಲಿ ಬಸಿಗಾಲುವೆ ವ್ಯವಸ್ಥೆಯನ್ನು ಕಲ್ಪಿಸುವುದು ಸೂಕ್ತವಾಗಿದೆ. |
| ಅಡಿಕೆ (ಬೋರ್ಡೋ ದ್ರಾವಣ) | ರೈತರು 1% ಬೋರ್ಡೋ ದ್ರಾವಣವನ್ನು ಸಿಂಪಡಿಸಲು ಸೂಕ್ತ ಸಮಯವಾಗಿದೆ. |
| ಅಡಿಕೆ (ಬೇರು ಹುಳ) | ರೈತರು ಸಂಜೆ 6:30 ರಿಂದ 7:30ರ ಸಮಯದಲ್ಲಿ ಹಾರಾಡುವ ರೆಕ್ಕೆ ಹುಳುಗಳನ್ನು ಹಿಡಿದು ನಾಶಪಡಿಸಬೇಕು.<br>ಕ್ಲೋರೋಫೈರಿಫಾಸ್ ಅನ್ನು 2 ಮಿ.ಲೀ/ಲೀ ನೀರಿಗೆ ಮಿಶ್ರಣ ಮಾಡಿದ ಕೀಟನಾಶಕದ ದ್ರಾವಣವನ್ನು ಅಡಿಕೆ ಗಿಡ/ಮರದಲ್ಲಿರುವ ಬೇರು ತಲುಪುವಂತೆ ಸುರಿಯುವುದು. |
| ಅಡಿಕೆ (ಪೋಷಕಾಂಶ ನಿರ್ವಹಣೆ) | 15–20 ದಿನಗಳ ಮುನ್ನ ಕೃಷಿ ಸುಣ್ಣವನ್ನು ಹಾಕಿರುವ ರೈತರು ಶಿಫಾರಸ್ಸಿನ ಪ್ರಮಾಣದ ರಸಗೊಬ್ಬರವನ್ನು ಅಂದರೆ 100:40:140 ಗ್ರಾಂನಷ್ಟು ಸಾರಜನಕ, ರಂಜಕ ಮತ್ತು ಪೊಟ್ಯಾಷ ಅನ್ನು ಪ್ರತಿ ಗಿಡಕ್ಕೆ/ಮರಕ್ಕೆ ಬುಡ ಮಾಡಿ ನೀಡುವುದು ಸೂಕ್ತವಾಗಿದೆ. |
| ತೆಂಗು (ಕುರುವಾಯಿ ದುಂಬಿ) | ಕುರುವಾಯಿ ದುಂಬಿ ನಿಯಂತ್ರಣ ಮಾಡಲು ಕ್ಲೋರೋಫೈರಿಫಾಸ್ ಹರಳನ್ನು ಮರಳಿನ ಜೊತೆ 1:1 ಅನುಪಾತದಲ್ಲಿ ಮಿಶ್ರಣ ಮಾಡಿ ಸುಳಿ ಭಾಗಕ್ಕೆ ಹಾಕುವುದು. ಕುರುವಾಯಿ ಹುಳುಗಳನ್ನು ಸಂಗ್ರಹಿಸಿ ನಾಶಪಡಿಸುವುದು ಹಾಗೂ ತೆಂಗಿನ ತೋಟದಲ್ಲಿ ಸ್ವಚ್ಛತೆಯನ್ನು ಕಾಪಾಡುವುದು. ಕಸದ ಗುಂಡಿಯಲ್ಲಿರುವ ಕುರುವಾಯಿ ದುಂಬಿಗಳ ಸಂತಾನೋತ್ಪತಿಯ ಮೂಲಗಳನ್ನು ನಾಶಪಡಿಸುವುದು. |
| ತೆಂಗು (ಕಾಂಡ ಸೋರುವ ರೋಗ) | ಕಾಂಡ ಸೋರುವ ರೋಗ ನಿಯಂತ್ರಣ ಮಾಡಲು ರೈತರು ಕಾಂಡ ಭಾಗವನ್ನು ಕೆತ್ತಿದ ನಂತರ ಶೇಕಡ 1ರ ಬೋರ್ಡೋ ಪೇಸ್ಟನ್ನು ಹಚ್ಚಬೇಕು ಅಥವಾ 2 ಮಿ.ಲೀ ಹೆಕ್ಸಾಕೊನಜೋಲ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಬುಡಕ್ಕೆ ಸುರಿಯುವುದು (ಪ್ರತಿ ಮರಕ್ಕೆ 3ಲೀಟರ್) ಅದರ ಜೊತೆಗೆ ಪ್ರತಿ ಗಿಡಕ್ಕೆ 5 ಕೆ.ಜಿಯಷ್ಟು ಬೇವಿನ ಹಿಂಡಿಯನ್ನು ನೀಡುವುದು. |
| ತೆಂಗು (ಪೋಷಕಾಂಶ ನಿರ್ವಹಣೆ) | 15–20 ದಿನಗಳ ಮುನ್ನ ಕೃಷಿ ಸುಣ್ಣವನ್ನು ಹಾಕಿರುವ ರೈತರು ಶಿಫಾರಸ್ಸಿನ ಪ್ರಮಾಣದ ರಸಗೊಬ್ಬರವನ್ನು ಅಂದರೆ 170:120:400 ಗ್ರಾಂನಷ್ಟು ಸಾರಜನಕ, ರಂಜಕ ಮತ್ತು ಪೊಟ್ಯಾಷ ಅನ್ನು ಪ್ರತಿ ಗಿಡಕ್ಕೆ/ಮರಕ್ಕೆ ಬುಡ ಮಾಡಿ ನೀಡುವುದು ಸೂಕ್ತವಾಗಿದೆ. |
| ಬಾಳೆ (ಸಾಮಾನ್ಯ ಸಲಹೆ) | 5 ತಿಂಗಳ ನಂತರ ಪ್ರತಿ ಲೀಟರ್ ನೀರಿಗೆ 5ಗ್ರಾಂ. ಬನಾನ ಸ್ಪೆಷಲ್(ಲಘು ಪೋಷಕಾಂಶ) ಮಿಶ್ರಿಸಿ ಸಿಂಪಡಿಸುವುದು. (15ಲೀ. ಸ್ಪ್ರೇಯರ್‌ಗೆ ಒಂದು ನಿಂಬೆ ಹಣ್ಣು ಹಾಗೂ ಒಂದು ಶಾಂಪೂವನ್ನು ಬೆರೆಸಬೇಕು) |
| ಕಾಳುಮೆಣಸು (ಸೊರಗು ರೋಗ) | ಮುಂಜಾಗ್ರತ ಕ್ರಮವಾಗಿ ರೋಗ ಬಂದಿರುವ ಬಳ್ಳಿಗಳ ಎಲೆಗಳನ್ನು ಕಿತ್ತು ನಾಶಪಡಿಸಬೇಕು ಅನಂತರ ಬೇವಿನ ಹಿಂಡಿ ಮಿಶ್ರಿತ ಅಥವಾ ಸಹ್ಯಾದ್ರಿ ತ್ರಿಶೂಲ್ ಮಿಶ್ರಿತ ಕೊಟ್ಟಿಗೆ ಗೊಬ್ಬರವನ್ನು ಬಳ್ಳಿಗಳಿಗೆ ನೀಡಬೇಕು ಮತ್ತು ಮಳೆ ನೀರು ನಿಲ್ಲದಂತೆ ಹರಿದು ಹೋಗಲು ಸೂಕ್ತ ಬಸಿಗಾಲುವೆ ವ್ಯವಸ್ಥೆ ಕಲ್ಪಿಸುವುದು. ಒಣಗಿದ ಹಾಗೂ ನೆಲದ ಮೇಲೆ ಹಬ್ಬಿರುವ ಬಳ್ಳಿಗಳನ್ನು ಕತ್ತರಿಸುವುದು ಸೂಕ್ತವಾಗಿದೆ. ಅಥವಾ<br>ರೈತರು ಸೊರಗು ರೋಗ ನಿರ್ವಹಣೆಗೆ 3 ಗ್ರಾಂ ಸಿ.ಓ.ಸಿ/ತಾಮ್ರದ ಆಕ್ಸಿ ಕ್ಲೋರೈಡ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಬಳ್ಳಿಯ ಬುಡಕ್ಕೆ ಹಾಕುವುದು (5ಲೀಟರ್ ನಷ್ಟು ಮಿಶ್ರಿತ ದ್ರಾವಣವನ್ನು ಪ್ರತಿ ಬಳ್ಳಿಗೆ ಹಾಕುವುದು) ಅಥವಾ<br>ರೈತರು ಸೊರಗು ರೋಗ ನಿರ್ವಹಣೆಗೆ ಪ್ರತಿ ಲೀಟರ್ ನೀರಿಗೆ 2 ಮಿ.ಲೀ ಪ್ರಪಿಕೊನೊಜೋಲ್ ಅನ್ನು ಮಿಶ್ರಿಸಿ/ಬೆರಸಿ ಬಳ್ಳಿಗೆ ಸಿಂಪಡಿಸುವುದು |
| ಗೇರು (ಕಾಂಡ ಕೊರಕ) | ರೈತರು ಕಾಂಡ ಕೊರಕ ನಿರ್ವಹಣೆ ಮಾಡಲು ಮೊದಲು ಕಾಂಡ ಕೊರಕ ಭಾಧಿತ ರಂಧ್ರವನ್ನು ತಂತಿಯ ಸಹಾಯದಿಂದ ಶುಚಿಗೊಳಿಸಿ ನಂತರ ಕಾಂಡ ಕೊರಕವನ್ನು ಹೊರತೆಗೆದು ನಾಶಪಡಿಸಬೇಕು. ತದನಂತರ 1 ಮಿ.ಲೀ. ಕ್ಲೋರೋಫೈರಿಫಾಸ್ ಅಥವಾ ಮೊನೊಕ್ರೊಟಾಫಾಸ್ ಪೇಸ್ಟ್ ಅನ್ನು ರಂಧ್ರಕ್ಕೆ ಹಚ್ಚುವುದು. |

## ಕ್ಷೇತ್ರ ಬೆಳೆಗಳು:

| | |
|---|---|
| ಭತ್ತದ ಸಸಿಮಡಿ (ಪ್ರತಿ ಎಕರೆಗೆ) | 7.5 ಮೀ ಉದ್ದದ, 5.2ಮೀ ಅಗಲ ಮತ್ತು 10 ಸೆಂ.ಮೀ ಎತ್ತರದ 30 ಸಸಿಮಡಿಗಳನ್ನು ಮಾಡಬೇಕುಅಳತೆಯ 30 ಸಸಿಮಡಿಯನ್ನು ತಯಾರಿಮಾಡಬೇಕು (300 ಚ.ಮೀ./ಎಕರೆಗೆ), 25ಕಿ.ಗ್ರಾಂ ಕೊಟ್ಟಿಗೆ ಗೊಬ್ಬರ, 195 ಗ್ರಾಂ ಯೂರಿಯಾ, 280 ಗ್ರಾಂ ಎಸ್.ಎಸ್.ಪಿ ಮತ್ತು 75 ಗ್ರಾಂ ಮ್ಯೂರಿಯೆಟ್ ಆಫ್ ಪೊಟ್ಯಾಷ್ ಅನ್ನು ಪ್ರತಿ ಸಸಿಮಡಿಯಲ್ಲಿ ಬೆರೆಸಬೇಕು. ಉಪ್ಪು ನೀರಿನ ದ್ರಾವಣದಲ್ಲಿ (1:4) ಬೀಜವನ್ನು ಅದ್ದಿಸಿ ತೆಗೆದ ಗಟ್ಟಿಬೀಜವನ್ನು 3–4 ಬಾರಿ ಸ್ವಚ್ಛ ನೀರಿನಿಂದ ತೊಳೆದು, ನೆರಳಿನಲ್ಲಿ ಒಣಗಿಸಿ ಬಿತ್ತನೆ ಮಾಡಬೇಕು. 18–22 ದಿನದ ಸಸಿಗಳನ್ನು ನಾಟಿಮಾಡಲು ಉಪಯೋಗಿಸಬಹುದು. |
| ಭತ್ತದಲ್ಲಿ ಚಾಪೆ ನೇಜಿ ತಯಾರಿ (ಪ್ರತಿ ಎಕರೆಗೆ) | ➢ 25ಅಡಿ.ಉದ್ದ, 3ಅಡಿ.ಅಗಲ, 3/4 ಅಂಗುಲದಿಂದ 1 ಅಂಗುಲ ದಪ್ಪದ ಮಡಿಗಳನ್ನು ಪ್ಲಾಸ್ಟಿಕ್ ಹಾಳೆಯ ಮೇಲೆ ಸಿದ್ದಪಡಿಸಿ ಅದಕ್ಕೆ ಮಣ್ಣು ಮತ್ತು ಹುಡಿಯಾದ ಕೊಟ್ಟಿಗೆ ಗೊಬ್ಬರ/ಎರೆಗೊಬ್ಬರ ಮತ್ತು ಕಲ್ಲುಗಳಿರದ ಹುಡಿ ಮಣ್ಣನ್ನು |

| | |
|---|---|
| | ಸಮಪ್ರಮಾಣದಲ್ಲಿ ಮಿಶ್ರಣ ಮಾಡಿ 1 ಅಂಗುಲದಷ್ಟು ದಪ್ಪಕ್ಕೆ ಹರಡಬೇಕು. ನಂತರ 24 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ, 6 ಗಂಟೆಗಳ ಕಾಲ ಬೆಚ್ಚನೆಯ ಸ್ಥಳದಲ್ಲಿಟ್ಟು ಮೊಳಕೆ ಬರಿಸಿದ ಭತ್ತದ ಬೀಜವನ್ನು ಪ್ರತಿ 10 ಚದರ.ಅಡಿಗೆ 1ಕಿ.ಗ್ರಾಂ. ನಂತೆ ಒಂದೇ ಸಮನಾಗಿ ಬಿತ್ತನೆ ಮಾಡಿ ಅದರ ಮೇಲೆ ತೆಳುವಾಗಿ ಮಣ್ಣನ್ನು ಹರಡಬೇಕು.<br>➢ ಪಕ್ಷಿಗಳ ಮತ್ತು ಸೂರ್ಯನ ತಾಪಮಾನವನ್ನು ತಡೆಯಲು ಭತ್ತದ ಹುಲ್ಲಿನಿಂದ ಮುಚ್ಚಬೇಕು.<br>➢ ಪ್ರತಿ ದಿನ 2-3 ಬಾರಿ ತಪ್ಪದೇ ತೆಳುವಾಗಿ ನೀರನ್ನು ಚಿಮುಕಿಸಬೇಕು. |
| ಭತ್ತ<br>(ಭೂಮಿ ಸಿದ್ಧತೆ) | ಮಣ್ಣು ಪರೀಕ್ಷೆ ಶಿಫಾರಿತ ಸುಣ್ಣ ಮತ್ತು 4 ಟನ್ ಕೊಟ್ಟಿಗೆ ಗೊಬ್ಬರವನ್ನು ಮಣ್ಣಿಗೆ ಸೇರಿಸಿ ಭೂಮಿಯನ್ನು ಉಳುಮೆ ಮಾಡಲು ಸೂಕ್ತ ಸಮಯವಾಗಿದೆ. |

## ಜಾನುವಾರು ಸಲಹೆ:

| | |
|---|---|
| ಹಸು<br>(ಸಾಮಾನ್ಯ ಸಲಹೆ) | ➢ ದನ ಕರುಗಳಿಗೆ ಹಸಿರು ಮೇವನ್ನು ಒದಗಿಸಲು ಮೇವಿನ ಜೋಳ, ಅಲಸಂದೆ, ಗೋವಿನ ಜೋಳ ಮತ್ತು ನೇಪಿಯರ್ ಹುಲ್ಲನ್ನು ಹಾಕಲು ಸೂಕ್ತ ಸಮಯವಾಗಿದೆ.<br>➢ ಮಳೆಗಾಲವಾಗಿರುವುದರಿಂದ ಗುಡುಗು-ಸಿಡಿಲು ಬರುವ ಸಂಭವವಿರುವುದರಿಂದ ಜಾನುವರುಗಳನ್ನು ವಿದ್ಯುತ್ ಕಂಬದ ಕೆಳಗೆ, ತೆರೆದ ಪ್ರದೇಶಗಳಲ್ಲಿ ಹಾಗೂ ಮರದ ಕೆಳಗೆ ಕಟ್ಟಿಹಾಕದೆ ಕೊಟ್ಟಿಗೆಯಲ್ಲಿ ಕಟ್ಟುವುದು ಸೂಕ್ತ.<br>➢ ಗಂಟಲು ಬೇನೆ & ಚಪ್ಪೆ ರೋಗ: ಈ ರೋಗಗಳು ಮುಂಗಾರು ಸಮಯದಲ್ಲಿ ಉಲ್ಬಣವಾಗುವ ಸಂಭವವಿರುವುದರಿಂದ ಜೂನ್ ತಿಂಗಳಿನಲ್ಲಿ ಈ ರೋಗದ ವಿರುದ್ಧ ಲಸಿಕೆ ಹಾಕಿಸುವುದು ಸೂಕ್ತವಾಗಿದೆ.<br>➢ ಜಾನುವಾರುಗಳಿಗೆ ಜಂತುನಾಶಕವನ್ನು ನೀಡುವುದು |

## ಸಾಮಾನ್ಯ ಸಲಹೆ:

| | |
|---|---|
| ಮಳೆ ನೀರು ಕೊಯ್ಲು ಘಟಕ | ರೈತರು ತಮ್ಮ ಜಮೀನಿನಲ್ಲಿ ಈಗಾಗಲೇ ನಿರ್ಮಿಸಿರುವ ಮಳೆ ನೀರು ಕೊಯ್ಲು ಘಟಕಗಳಾದ ಕೃಷಿ ಹೊಂಡಗಳನ್ನು ಪುನಶ್ಚೇತನಗೊಳಿಸುವುದು. ಇದರಿಂದ ರೈತರು ಬೇಸಿಗೆಯಲ್ಲಿ ನೀರಿನ ಕೊರತೆ ಎದುರಿಸುವುದನ್ನು ತಗ್ಗಿಸಬಹುದು ಹಾಗೂ ತಮ್ಮ ಆದಾಯವನ್ನು ಹೆಚ್ಚಿಸಲು ಮೀನು ಸಾಕಾಣಿಕೆಯನ್ನು ಮಾಡಬಹುದಾಗಿದೆ. |
| ಮೀನು ಮರಿ ಉತ್ಪಾದನೆ | ➢ ಕರಾವಳಿ ಮೀನು ಕೃಷಿಕರು ಮಿನು ಕೊಳದ ಪೂರ್ವ ಸಿದ್ಧತೆ ಮಾಡಿಕೊಳ್ಳಲು ಸೂಕ್ತ ಸಮಯವಾಗಿದೆ.<br>➢ ಮೀನು ಮರಿ ಪಾಲನಾ ಕೊಳಗಳಲ್ಲಿ ಸುಣ್ಣವನ್ನು ಹಾಕುವ ಮೂಲಕ ರಸಸಾರವನ್ನು 7.5 ಇರುವಂತೆ ಸರಿದೂಗಿಸುವುದು. ಅನಂತರ ಹಟ್ಟಿ ಗೊಬ್ಬರವನ್ನು ಹಾಕಿ ನೈಸರ್ಗಿಕ ಮೀನಿನ ಆಹಾರ ಉತ್ಪಾದನೆಯಿಂದ ಕೊಳದ ನೀರು ತಿಳಿ ಹಸಿರಿನಿಂದ ಕಂದು ಬಣ್ಣಕ್ಕೆ ತಿರುಗುವ ವೇಳೆಗೆ ಸಿಹಿ ನೀರು ಮೀನು ಮರಿಗಳನ್ನು ದಾಸ್ತಾನು ಮಾಡಬಹುದು. ಈ ಮರಿಗಳು ಜೂನ್ ಮತ್ತು ಜುಲೈ ತಿಂಗಳಲ್ಲಿ ಅಧಿಕೃತ ಸರಬರಾಜು ಮಾಡುವವರಲ್ಲಿ ಮಾರಾಟಕ್ಕೆ ಲಭ್ಯವಿರುತ್ತದೆ. |

(ಈ ಮೇಲಿನ ಬೆಳೆ ಸಲಹೆಯು ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ಹವಾಮಾನ ಮುನ್ಸೂಚನೆಯ ಆಧಾರವಾಗಿದೆ)

ಶ್ರೀ. ಪ್ರವೀಣ್ ಕೆ.ಎಮ್,
ತಾಂತ್ರಿಕ ಅಧಿಕಾರಿಗಳು,
ಜಿ.ಕೆ.ಎಮ್.ಎಸ್-ವಿಭಾಗ,
ವ.ಕೃ.ತೋ.ಸಂ.ಕೇ-ಬ್ರಹ್ಮಾವರ.

ಡಾ. ಕೆ. ವಿ. ಸುಧೀರ್ ಕಾಮತ್,
ನೊಡಲ್ ಅಧಿಕಾರಿಗಳು,
ಜಿ.ಕೆ.ಎಮ್.ಎಸ್-ವಿಭಾಗ,
ವ.ಕೃ.ತೋ.ಸಂ.ಕೇ-ಬ್ರಹ್ಮಾವರ.